ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಈ ಶಾಲೆಯು ಆಡಳಿತ ಮಂಡಳಿಯಲ್ಲಿ ಒಡಕು ಇದ್ದುದರಿಂದ ವೇತನವನ್ನು ಬಿಡುಗಡೆ ಮಾಡಲಿಲ್ಲ.

ಆ) ಅನುದಾನ ಸಂಹಿತೆಯ ನಿಯಮಗಳನ್ನು ಪಾಲಿಸಲ್ಲವಾದ್ದರಿಂದ ವೇತನ ಬಿಡುಗಡೆ ಮಾಡಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಕಡಿಮೆ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಹಾಜರಾತಿ ಕ್ಷೀಣವಾಗದೆ ವೇತನ ಬಿಡುಗಡೆಗೆ ಅವಕಾಶವಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹರಿಜನ – ಗಿರಿಜನ ಹೆಣ್ಣು ಮಕ್ಕಳ ವಸತಿ ಶಾಲಾ ಕಟ್ಟಡ ನಿರ್ಮಾಣ

೩೬೨. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡಿನಲ್ಲಿ ವಿದ್ಯಾ ಇಲಾಖೆಯಿಂದ ನಡೆಸುತ್ತಿರುವ ಹರಿಜನ–ಗಿರಿಜನ ಹೆಣ್ಣು ಮಕ್ಕಳ ವಸತಿ ಶಾಲಾಕಟ್ಟಡ ನಿರ್ಮಾಣಕ್ಕೆ ಸರ್ಕಾರದವರು ಮಂಜೂರಾತಿ ಕೊಟ್ಟಿರುವರೇ ;

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು ?

ಇ) ಕಟ್ಟಡ ನಿರ್ಮಾಣ ಕೆಲಸ ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಮಹಮದ್ ಮೊಯಿನುದ್ದೀನ್ (ವಸತಿ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ರೂ. ೧೦,೩೭,೦೦೦,೦೦ಗಳು.

ಇ) ಜಿಲ್ಲಾ ಪರಿಷತ್ತಿನಿಂದ ಆಡಳಿತ ಅನುಮೋದನೆ ಬಂದನಂತರ ಪ್ರಾರಂಭಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ರಘುಪತಿ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡ ಬಯಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಗಿದೆ.

ಬೆಂಗಳೂರು – ಮೈಸೂರು ಮಾರ್ಗದ ರಸ್ತೆ

೩೬೩. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು–ಮೈಸೂರು ಮಾರ್ಗದಲ್ಲಿ ನಾಲ್ಕು ರಸ್ತೆಗಳ ನಿರ್ಮಾಣಕ್ಕೆ ರಾಜ್ಯಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಬೆಂಗಳೂರು ಮೈಸೂರುಗಳ ನಡುವೆ ವೇಗ ರಸ್ತೆ (ನಾಲ್ಕು ಪಥಗಳ ರಸ್ತೆ) ನಿರ್ಮಿಸುವ ಬಗ್ಗೆ ಪ್ರಾಜೆಕ್ಟ್ ತಯಾರು ಮಾಡಲು ಮೆ. ಇಂಟರ್ ಕಾಂಟಿನೆಂಟಲ್ ಕನ್ಸಲ್ಟೆಂಟ್ಸ್ ಅಂಡ್ ಟೆಕ್ನೋಕ್ರಾಟ್ಸ್ ಪ್ರೈವೇಟ್ ಲಿಮಿಟೆಡ್, ನವದೆಹಲಿ ಇವರಿಗೆ ವಹಿಸಿಕೊಡಲಾಗಿದೆ. ಸರ್ವೆ ಕೆಲಸ ಪ್ರಗತಿಯಲ್ಲಿದೆ.